ಕುಪ್ಪಣ್ಣಯ್ಯ 'ನಾಡಿದ್ದು ನನ್ನಪ್ಪನ ಶ್ರಾದ್ಧ. ನಿಮ್ಮನ್ನು ಆಹ್ವಾನಿಸಬೇಕೆಂದಿದ್ದೆ. ಬಹುತೇಕ ಆಮಂತ್ರಿಸುವವರನ್ನೆಲ್ಲ ಫೋನಿನಲ್ಲಿ ಹೇಳಿ ಆಗಿದೆ, ನೀವು ಇನ್ನೂ ಮೊಬೈಲ್ ತೆಗೊಂಡಿಲ್ಲ!' ಎಂದವರೇ, 'ನಿಮಗೆ ಅದು ಆಗುವುದಿಲ್ಲ ಎಂದಾಗ, ನಾನು ನಿಮ್ಮ ಮೊಮ್ಮಗ ಶಾಲೆಗೆ ಹೋಗುವವನಿದ್ದಾನಲ್ಲ, ಅವನಿಗೆ ಆ ಮೊಬೈಲನ್ನು ಹೇಗೆ ಬಳಸಬೇಕು ಗೊತ್ತಿರುತ್ತದೆ ಎಂದು, ಮೊಬೈಲ್ ತಗೊಳ್ಳಿ ಅಂದಿದ್ದೆ. ಇನ್ನಾದರೂ ನೀವು ತೆಗೆದುಕೊಳ್ಳದಿದ್ದರೆ, ನಾನು ನನ್ನ ಅಪ್ಪ ಅಮ್ಮನ ಶ್ರಾದ್ಧಕ್ಕೆ ನಿಮ್ಮನ್ನು ಆಮಂತ್ರಿಸುವುದು ಕಷ್ಟ' ಎಂದರು ನಗುತ್ತಾ.

ದಾಸುಭಟ್ಟ್ರು ನಕ್ಕು 'ನಿಮ್ಮಲ್ಲಿನ ಶ್ರಾದ್ಧಕ್ಕೆ ನನಗೆ ಆಹ್ವಾನ ಇಲ್ಲದಿದ್ದರೂ ಚಿಂತಿಲ್ಲ. ನಾನು ಮೊಬೈಲ್ ತಗೊಳ್ಳುವುದು ಖಂಡಿತ ಇಲ್ಲ. ಯಾಕೆಂದರೆ ಮನೆಗೆ ಮೊಬೈಲ್ ಬಂತೋ, ಮಕ್ಕಳ ವಿದ್ಯಾಭ್ಯಾಸ ಕವುಚಿ ಬೀಳುವುದು ಖಂಡಿತ!' ಎಂದರು.

